ಒಂದಾಣೆ ಮಾಲೆ 197

ಫಲೋದಯ

ಅಥವಾ

ಗಿರಿಜಾ ಕಲ್ಯಾಣ

[ಏಕಾಂಕ ನಾಟಕ]

(ಕಾಳಿದಾಸನ "ಕುಮಾರಸಂಭವ"ದ ಐದನೇ ಸರ್ಗದ ಆಧಾರದಿಂದ.)

*

ರಚಯಿತರು:
ವಿದ್ವಾನ್ ಎಂ. ಗೋಪಾಲಕೃಷ್ಣ ಭಟ್ಟ, ಎಡನಾಡು, ಕುಂಬಳೆ.

*

1958

ಬೆಲೆ: ಒಂದಾಣೆ.

ಒಂದಾಣೆ ಮಾಲೆ, ಮಂಗಳೂರು.

ಫಲೋದಯ ಅಥವಾ ಗಿರಿಜಾ ಕಲ್ಯಾಣ

[ಏಕಾಂಕ ನಾಟಕ]

ಪಾತ್ರಗಳು: ೧. ಪಾರ್ವತಿ. ೨. ಸಖಿ. ೩. ಮೇನಕೆ.
೪. ತಾಪಸ. ೫. ಬ್ರಹ್ಮಚಾರಿ (ಶಿವ).

ದೃಶ್ಯ ೧

(ಹಿಮಾಲಯದ ಅರಮನೆ. ಕನ್ಯಾಂತಃಪುರದಲ್ಲಿ ಪಾರ್ವತಿಯೂ ಸಖಿಯೂ ಇರುವರು.)

ಪಾರ್ವತಿ: (ಸ್ವಗತ, ದುಃಖದಿಂದ) ಹೌದು. ಇಂದು ನಾನು ಭಗ್ನ ಮನೋರಥಳು. ಅಂದೊಮ್ಮೆ ಪಿನಾಕಿಯ ಸೇವೆಗಾಗಿ ತಂದೆ ನನ್ನನ್ನು ಆತನ ಬಳಿಗೆ ಕಳುಹಿಸಿಕೊಟ್ಟಾಗ ನಾನೆಷ್ಟು ಆಸೆಗಳನ್ನು ಕಟ್ಟಿಕೊಂಡಿದ್ದೆ! ಅಂದು ತಂದೆಯ ಮನಸ್ಸಿನಲ್ಲಿ ಎಂತಹ ಅಮೋಘ ಅಭಿಲಾಷೆಯಿತ್ತು! ಆದರೆ, ಅವುಗಳೆಲ್ಲವೂ ಇಂದು ವ್ಯರ್ಥವಾದುವು, ರತ್ನವನ್ನು ಹೊಂದಬಯಸಿದ ನನ್ನ ಮನ ಅಲ್ಲಿ ಬೆಂಕಿಯ ಕೆಂಡವನ್ನು ಕಾಣಬೇಕಾಯಿತು! ಆತನು ತಾಳಿದುದು ಅಂತಹ ವಿಪರ್ಯಾಸ. ಭ್ರೂಮಧ್ಯಲೋಚನನಾಗಿ ನಿಶ್ಚಲತೆಯಿಂದ ಧ್ಯಾನಾಸಕ್ತನಾದ ಆತನ ಸೌಮ್ಯ ರೂಪು ಮರುಕ್ಷಣದಲ್ಲಿ ಎಂತಹ ಭಯಾನಕವಾಯಿತು! ಲೋಕವನ್ನು ಸುಡುವ ಮೂರನೆಯ ಕಣ್ಣಿನಿಂದ ಕಾರಿದ ಬೆಂಕಿಯಲ್ಲಿ ಕಾಮನು ದೀಪಕ್ಕೆ ಬಿದ್ದ ಪತಂಗದ ಗತಿಯನ್ನು ಹೊಂದಿದ. ನನ್ನ ಸಮಕ್ಷದಲ್ಲಿ ನಡೆದ ಕಾಮನ ಸಾವು ನನ್ನೆಲ್ಲಾ ಅಭಿಲಾಷೆಗಳ ಬೇರನ್ನೇ ಕಿತ್ತುಹಾಕಿತು. ಪಿನಾಕಿ ಮನ್ಮಥನನ್ನೇ ಸುಟ್ಟಮೇಲೆ ನಾನು ರೂಪದಿಂದ ಆತನನ್ನು ಹೇಗೆ ತಾನೆ ಹೊಂದಬಲ್ಲೆ? ನನ್ನ ಹೃದಯವೇ ಇಂದು ನನ್ನನ್ನು ಶಪಿಸುತ್ತದೆ—"ವರ್ಷಗಳ ಕಾಲ ಆತನ ಪರಿಸರದಲ್ಲಿಯೇ ಇದ್ದು, ಅವನ ಮನಸ್ಸನ್ನು ಸೆಳೆದುಕೊಳ್ಳಲಾಗದ ನಿನ್ನ ರೂಪಿಗೆ ಧಿಕ್ಕಾರವಿರಲಿ" ಎಂದು. ಹೌದು. ನಲ್ಲರೊಪ್ಪದ ಲಾವಣ್ಯವಿದ್ದೂ ಏನು ಪ್ರಯೋಜನ? (ನಿಟ್ಟುಸಿರು ಬಿಡುವಳು.)

ಸಖಿ: ಗೆಳತಿ! ಏನನ್ನೋ ದೀರ್ಘವಾಗಿ ಯೋಚಿಸುವಂತಿದೆಯಲ್ಲ?

ಪಾರ್ವತಿ: ನಾನಿನ್ನು ಯೋಚಿಸಿಯಾದರೂ ಏನು ಮಾಡಬಲ್ಲೆ ಸಖಿ?

ಸಖಿ: ಅಮೋಘ ಬಯಕೆಯೊಂದನ್ನು ದೀರ್ಘ ತಪಸ್ಸಿನಿಂದ ಕೈಗೂಡಿಸಿಕೊಳ್ಳಲಾರದ ನಿರಾಶಾಹೃದಯಿಯ ಬೇಗುದಿಯನ್ನು ನಾನು ಅರಿಯಲಾರೆನೆ? ಎಳವೆಯಿಂದಲೂ ನಿನ್ನ ಗೆಳತಿಯಾದ ನನಗೆ ನಿನ್ನ ಅಭಿಲಾಷೆಗಳು ಅರ್ಥವಾಗಲಾರವೆ ಹೇಳು? ಆದರೆ, ನೀನು ಅದಕ್ಕಾಗಿ ಇನ್ನೂ ದುಃಖಿಸುತ್ತಾ ಕುಳಿತುಕೊಳ್ಳುವುದು ಯೋಗ್ಯವೇ?

ಪಾರ್ವತಿ: ಹೌದು, ಗೆಳತಿ! ಇನ್ನು ದುಃಖಿಸುವುದಷ್ಟೇ ಉಳಿದಿದೆ.

ಸಖಿ: ಪಾರ್ವತಿ! ಇದೇನು ನೀನು ಹೀಗೆ ಮಾತನಾಡುತ್ತಿರುವೆ? ಅಂದು ಆ ಶಿವನ ಶುಶ್ರೂಷೆಗಾಗಿ ತಂದೆಯ ಆಜ್ಞೆಯನ್ನು ತನ್ನ ಮನೋರಥದೊಂದಿಗೆ ಶಿರಸಾವಹಿಸಿದಾಗ ಇದ್ದ ಹಿಮಾಲಯಪುತ್ರಿಯ ಧೈರ್ಯ-ಸ್ಥೈರ್ಯಗಳು ಇಂದು ಎಲ್ಲಿ ಮಾಯವಾದುವು?

ಪಾರ್ವತಿ: ದುಃಖದ ಕುಲುಮೆಯನ್ನು ಬೆಂದಾಗ ಜೀವಿಯೆದೆ ಅಧೀರವಾಗುತ್ತದೆ, ನಿರಾಶವಾಗುತ್ತದೆ, ಸಖಿ!

ಸಖಿ: ಹೌದು. ಅದೇ ಅಧೀರವಾದ ಹೃದಯದಲ್ಲಿ ಮತ್ತೆ ಆಶೆಯ ಬೆಳಕನ್ನಿಟ್ಟುಕೊಳ್ಳುವುದು ಮನೋನಿಶ್ಚಲೆಯರ ಸ್ವಭಾವವಲ್ಲವೆ? ಅಮೂಲ್ಯವಾದ ಒಂದು ರತ್ನವನ್ನೇ ಹೊಂದಬಯಸಿದ ನಿನ್ನ ಮನಸ್ಸು ಇಷ್ಟರಲ್ಲಿಯೇ ನಿರಾಶವಾಗಬಹುದೇ ಸಖಿ? ನಿರಾಶೆ ಹೇಡಿಯ ಹೆಗ್ಗುರುತು. ಅದು ನಿನ್ನಂತಹ ಮನಸ್ವಿನಿಯರಿಗೆ ಹೇಳಿದುದಲ್ಲ. ಪ್ರಯತ್ನಕ್ಕೆ ಎಲ್ಲಿಯೂ ಫಲಸಿದ್ಧಿಯಿದೆ. ನೀನೇಕೆ ಇನ್ನೊಮ್ಮೆ ಸಾಧನೆಯ ಹಾದಿ ತುಳಿಯಬಾರದು?

ಪಾರ್ವತಿ: ಆ ಪರಮ ಶಿವನನ್ನು ಹೊಂದುವುದಕ್ಕೆ ಇನ್ನೂ ಬೇರೆ ದಾರಿಯಿದೆಯೇ?

ಸಖಿ: ಇದೆ! ಆದರೆ ಅದು ಸುಗಮವಾದುದಲ್ಲ. ಹಿಂದೆ ಎಷ್ಟೋ ಸಾಧಕರು ಶಿವನನ್ನೊಲಿಸುವುದಕ್ಕಾಗಿ ಆ ಪಥವನ್ನಾಶ್ರಯಿಸಿದ್ದಾರೆ. ತನು ಮನಗಳನ್ನು ದಂಡಿಸಿ ಆ ದುರ್ಗಮ ದಾರಿಯಲ್ಲಿ ನಡೆದು ತಮ್ಮ ಈಪ್ಸಿತವನ್ನು ಹೊಂದಿದ್ದಾರೆ. ಅದೇ ದುರ್ಗಮ ದಾರಿಯನ್ನು ನೀನೂ ಇಂದು ಹಿಡಿಯಬಾರದೇಕೆ?

ಪಾರ್ವತಿ: ಸಖಿ! ತನ್ನ ತೀವ್ರ ಮನೋಭಿಲಾಷೆಯನ್ನು ಪೂರೈಸುವುದರಲ್ಲಿ ಮನುಷ್ಯನಿಗೆ ದುರ್ಗಮವಾದುದೇ ಇಲ್ಲ. ಇದೇ ಯೋಚನೆ ನನಗೂ ಹಿಂದೊಮ್ಮೆ ಹೊಳೆದಿತ್ತು. ಆದರೆ ತಾಯಿ-ತಂದೆಗಳ ಪ್ರೀತಿ ನನ್ನನ್ನು ಈ ಕಷ್ಟದಲ್ಲಿರಲು ಬಿಡಲಾರದು ಎಂಬುದಕ್ಕಷ್ಟೇ ಮನವಳುಕುತಿತ್ತು. ನನ್ನ ಹೃದಯೇಶ್ವರನ ಮನವನ್ನು ಗೆಲ್ಲುವುದರಲ್ಲಿ ನಾನು ಎಂತಹ ತ್ಯಾಗವನ್ನೂ ಮಾಡುವುದಕ್ಕೆ ಸಿದ್ಧಳಿದ್ದೇನೆ. ಹೀಗಿರುವಾಗ ನನ್ನ ತನುದಂಡನೆಯು ಒಂದು ತ್ಯಾಗವೇ ಅಲ್ಲ. ಆದರೆ, ನಿಶ್ಚಲಮೂರ್ತಿ ಕಾಮಹರನು ಯಃಕಶ್ಚಿತ್ ಕಾಮಿನಿಯಾದ ನನ್ನ ತಪಸ್ಸಿಗೆ ಒಲಿಯುವನೇ?

ಸಖಿ: ದೇವೀ, ಸಂಶಯವೇ? ಮೋಡ ಬೆಂಕಿಯನ್ನಷ್ಟೇ ಅಲ್ಲ, ಮಳೆಯನ್ನು ಸುರಿಸಬಲ್ಲುದಲ್ಲವೇ? ಆದರೆ, ಅದಕ್ಕೆ ಕಾಲಾವಕಾಶವೂ, ಅನವರತ ಸಾಧನೆಯೂ ಬೇಕು. ಆತ ಎಂದಿಗಾದರೂ ಒಲಿಯದಿರುವನೇ?

ಪಾರ್ವತಿ: ಸಖಿ! ಈಗ ನನಗೆ ಸಂತೋಷವಾಯಿತು. ನಿನ್ನ ಹಿತನುಡಿಯನ್ನು ಕೇಳಿ, ನನ್ನ ಬೆಂದ ಹೃದಯಕ್ಕೆ ಎಷ್ಟೋ ಸಮಾಧಾನವಾಯಿತು. ಇರಲಿ, ಇನ್ನು ತಪಸ್ಸಿನ ಯೋಚನೆಯನ್ನು ಮಾಡಬೇಕಾಗಿದೆ. ಇಲ್ಲವಾದಲ್ಲಿ ನಾನು ಇಚ್ಛಿಸಿದ ಅಂತಹ ಪತಿಯನ್ನು ಹೊಂದಿ ಆತನ ಪವಿತ್ರ ಪ್ರೇಮಕ್ಕೆ ಪಾತ್ರಳಾಗಬಲ್ಲೆನೆ?

ಸಖಿ: ಈಗ ನೀನು ನಿನ್ನಂತಹವರು ಹಿಡಿಯಬೇಕಾದ ದಾರಿಯನ್ನೇ ಹಿಡಿದೆ. ಆದರೆ ಘನವಾದ ಕಾರ್ಯಕ್ಕೆ ಇಳಿಯುವ ಮೊದಲು ನೀನು ಮಾತಾಪಿತರ ಯೋಗ್ಯ ಆಶೀರ್ವಾದವನ್ನು ಪಡಕೊಳ್ಳಬೇಕಲ್ಲವೇ?

ಪಾರ್ವತಿ: ಅವಶ್ಯವಾಗಿಯೂ ಬೇಕು. ಅವರ ಆಶೀರ್ವಾದ ನನ್ನ ಕಷ್ಟವನ್ನು ದೂರಮಾಡಬಲ್ಲುದು! ಆದ್ದರಿಂದ ತಂದೆಯೊಡನೆ ನನ್ನ ಮನೋನಿಶ್ಚಯವನ್ನು ಹೇಳಿ ಆತನ ಒಪ್ಪಿಗೆಯನ್ನು ಪಡೆದು ಬಾ! ನಾನು ತಾಯಿಯ ಬಳಿಗೆ ಹೋಗುವೆನು. (ಇಬ್ಬರೂ ಹೋಗುವರು.)

ದೃಶ್ಯ ೨

(ಮೇನಕೆಯು ವ್ಯಥಿತಳಾಗಿ ಕುಳಿತಿರುವಳು.)

ಮೇನಕೆ: ಮನಸ್ಸಿಗೆ ಸಂತೋಷವಿಲ್ಲದಿದ್ದಾಗ ಎಷ್ಟು ಸಂಪತ್ತು ಇದ್ದು ತಾನೆ ಏನು ಪ್ರಯೋಜನ? ಈಶ್ವರನ ಉರಿಗಣ್ಣಿನಿಂದ ಕಾಮನು

ದಹಿಸಲ್ಪಟ್ಟ ಅನಂತರ ಮನೆಗೆ ಬಂದು ಅನುದಿನವೂ ದುಃಖಿಸುತ್ತಿರುವ ಪಾರ್ವತಿ ನನ್ನನ್ನು ಚಿಂತೆಗೊಳಗುಮಾಡಿದ್ದಾಳೆ. ಎಷ್ಟೋ ಸಾಂತ್ವನ ವನ್ನು ಹೇಳಿದೆ, ಗೆಳತಿಯರಿಂದ ಹೇಳಿಸಿ ನೋಡಿದೆ. ಏನೂ ಪ್ರಯೋ ಜನವಾಗಲಿಲ್ಲ ಆಕೆ ಮನೋವ್ಯಥೆಯಿಂದಲಾಗಿ ದಿನದಿಂದ ದಿನಕ್ಕೆ ಕೃಶ ವಾಗುತ್ತಿದ್ದಾಳೆ. ಆದರೆ, ನಾನು ಏನು ತಾನೆ ಮಾಡಲಿ? (ಎದುರು ನೋಡಿ) ಓಹೋ, ಆಕೆ ಇತ್ತಲೇ ಬರುತ್ತಿರುವಳು. (ಪ್ರೀತಿಯಿಂದ ಎದುರೇಳುವಳು.)

ಪಾರ್ವತಿ: ನಮಸ್ಕರಿಸುತ್ತೇನೆ, ಮಾತೆ!

ಮೇನಕೆ: ದೀರ್ಘಾಯುವಾಗು ಮಗಳೇ! (ಸಮೀಪ ಕುಳ್ಳಿರಿಸುವಳು.)

ಪಾರ್ವತಿ: ಸುಖವಿಲ್ಲದ ಬಾಳುವೆ ದೀರ್ಘವಾಗಲಿ ಎಂದು ಹರಸ ಬೇಡಿ ಮಾತೆ!

ಮೇನಕೆ: ನಿನ್ನ ಮನೋವೇದನೆ ನನಗೆ ಗೊತ್ತು, ತಾಯಿ! ಆದರೆ, ಏನು ಮಾಡಲಿ! (ನಿಟ್ಟುಸಿರು) ಎಲ್ಲವೂ ವಿಧಿಲಿಖಿತ. ಅಷ್ಟು ಸಮಯ ಉಪಚರಿಸುತ್ತಿದ್ದೂ ಆ ಮಹಾತ್ಮ ನಿನಗೊಲಿಯಲಿಲ್ಲ!

ಪಾರ್ವತಿ: (ಕುತೂಹಲ) ಅಮ್ಮ, ಮಹೇಶನನ್ನು ಒಲಿಸುವುದಕ್ಕಾ ಗಿಯೇ ಇನ್ನೊಂದು ಹೊಸ ಹಾದಿ ಹಿಡಿಯುವ ಯೋಚನೆ ಮಾಡಿದ್ದೇನೆ.

ಮೇನಕೆ: ಯಾವುದು ಮಗಳೆ, ಅದು?

ಪಾರ್ವತಿ: ಏಕದೇಕಧ್ಯಾನದಿಂದ ಮಾಡುವ ತೀವ್ರ ತಪಸ್ಸು........

ಮೇನಕೆ: (ಅವಳ ಬಾಯಿಗೆ ಕೈಮುಚ್ಚಿ) ತಪಸ್ಸು! ಹಾ! ಬೇಡ ಮಗಳೆ, ಈ ಹುಚ್ಚನ್ನು ಬಿಟ್ಟುಬಿಡು. ನಾನು ಎಂದಿಗೂ ನಿನ್ನನ್ನು ಅಗಲಿ ಇರಲಾರೆನು.

ಪಾರ್ವತಿ: (ದೀನಳಾಗಿ) ಅಮ್ಮಾ, ನಿನ್ನ ಮಗಳ ಸುಖಕ್ಕಾಗಿ ನೀನು ಇಷ್ಟು ತ್ಯಾಗಕ್ಕೆ ಸಿದ್ಧಳಾಗಲಾರೆಯಾ? ಅದೇ ನಿಶ್ಚಯದಿಂದ ನಿನ್ನ ಆಶೀ ರ್ವಾದದನ್ನು ಪಡೆಯುವುದಕ್ಕಾಗಿಯೇ ನಿನ್ನೆಡೆಗೆ ಬಂದಿದ್ದೇನೆ. ಆದ್ದರಿಂದ 'ನಿನಗೆ ಜಯವಾಗಲಿ' ಎಂದು ತಲೆ ಸವರಿ ನನ್ನನ್ನು ಕಳುಹಿಸಿ ಕೊಡಮ್ಮ!

ಮೇನಕೆ: (ದುಃಖಿತೆ) ಅರಮನೆಯಲ್ಲಿ ಸುಖವಾಗಿ ಕಾಲಕಳೆದ ನೀನು ತಪಸ್ಸಿನ ಬನ್ನವನ್ನು ತಿಳಿಯಲಾರೆ ಪಾರ್ವತಿ! ಅದು ನಿನ್ನಂತಹ ಕೋಮ

ಲಾಂಗಿಗೆ ಹೇಳಿದುದಲ್ಲ. ಚಿತ್ತಸ್ಥೈರ್ಯವುಳ್ಳ ಮುನಿಗಳೂ ತಪಸ್ಸಿನಿಂದ ತಮ್ಮ ಕೋರಿಕೆಯನ್ನು ಈಡೇರಿಸಿಕೊಳ್ಳಲಾರದೆ, ಕಷ್ಟಪಡುತ್ತಿರುವಾಗ ನಿನ್ನಂತಹ ಅಬಲೆಯರ ಪಾಡೇನು? ಮೃದುಶಿರೀಷ ಕುಸುಮವು ಹಕ್ಕಿಯ ಕಾಲ್ತುಳಿತವನ್ನು ಸಹಿಸಲಾರದು. ಮಗಳೆ! ತಪಸ್ಸಿನ ಆಲೋಚನೆಯನ್ನು ಬಿಟ್ಟುಬಿಡು. ಮನೆಯಲ್ಲಿದ್ದು ಮನಸ್ಸಿಗೆ ಇಷ್ಟಬಂದ ದೇವತೆಗಳನ್ನು ಆರಾಧಿಸಿ, ನಿನ್ನ ಇಷ್ಟಾರ್ಥವನ್ನು ಸಾಧಿಸು.

ಪಾರ್ವತಿ: ನಾನು ಆ ಪರಮ ಶಿವನನ್ನು ಹೊರತು ಬೇರೆ ಯಾವ ದೇವತೆಯನ್ನೂ ಆರಾಧಿಸಲಾರೆ—ಮಾತೆ. ನನಗೆ ಅವನೇ ದೇವನು. ಅವನೇ ಸರ್ವಸ್ವ! ಅವನನ್ನೊಲಿಸದೆ ರೂಪವಿದ್ದೂ ಇಲ್ಲದವಳಾಗಿ ಭೂಮಿಗೆ ಭಾರವಾಗಿ ನಾನು ಜೀವಿಸಲಾರೆ. ಅಮ್ಮಾ, ನನ್ನ ಹೃದಯಾಧೀಶನನ್ನು ತಪಸ್ಸಿನ ಮೂಲಕ ಒಲಿಸಿಯೇ ಬರುವವಳು ನಾನು!

ಮೇನಕೆ: ಪಾರ್ವತಿ! ನೀನು ಹೇಳುವುದು ಯಥಾರ್ಥವಾದುದು. ಆದರೆ........(ಚಿಂತೆ) ಹಸು ಕರುವನ್ನಗಲುವಂತೆ ನಿನ್ನನ್ನಗಲಿ ಹೇಗೆ ಬಾಳಲಿ? (ದುಃಖಾಶ್ರು ಉರುಳುವುದು.)

ಪಾರ್ವತಿ: ಅಮ್ಮಾ! ಸಾಮಾನ್ಯವಾದ ಕಾರ್ಯಕ್ಕೆ ಇಷ್ಟು ಚಿಂತೆ ಯೇಕೆ? (ಕಣ್ಣೀರೊರಸಿ) ನಾನು ಕಾಡಿನಲ್ಲಿಯೇ ಇರುವವಳಲ್ಲ. ಕೇವಲ ನನ್ನ ಈಪ್ಸಿತವು ಕೈಗೂಡುವಷ್ಟು ಕಾಲ ಮಾತ್ರ ಅಲ್ಲಿರುತ್ತೇನೆ. ಇಷ್ಟಾರ್ಥ ಸಿದ್ಧಿಯಾದ ಮರುದಿನ ಮತ್ತೆ ನಾನು ನಿನ್ನ ಬಳಿಗೆ ಬರುವೆನು. ಅಮ್ಮಾ! ಚಿಂತೆಯನ್ನು ಬಿಟ್ಟು ನಿಷ್ಕಲ್ಮಶಳಾಗಿ ನನ್ನನ್ನು ಹೋಗಿ ಬಾ ಎಂದು ಕಳು ಹಿಸಲಾರೆಯಾ?

ಮೇನಕೆ: (ಸ್ವಗತ) ಅಧೋಮುಖವಾಗಿ ಹರಿಯುವ ನೀರನ್ನೂ ಈಪ್ಸಿತಾರ್ಥದಲ್ಲಿ ಸ್ಥಿರವಾದ ಮನಸ್ಸನ್ನೂ ಯಾರು ತಾನೆ ತಿರುಗಿಸಬಲ್ಲರು? ಈಕೆಯ ಮನಸ್ಸು ಇಂದು ಅಷ್ಟು ಸ್ಥಿರವಾದಂತೆ ತೋರುತ್ತಿದೆ. ಹೀಗಿರುವಾಗ ನಾನ್ಯಾಕೆ ಕುಮಾರಿಯನ್ನು ತಡೆಯ ಬೇಕು? ಅವಳ ಇಚ್ಛೆಯಂತೆ ಆಚರಿಸಿ ವೃದ್ಧಿಯನ್ನು ಹೊಂದಲಿ. (ಪ್ರಕಾಶ) ನಿನ್ನ ಕಾಮನೆಯನ್ನು ಕಾಮಾರಿಯು ಶೀಘ್ರವಾಗಿ ಕರುಣಿಸಲಿ. ಮಗಳೆ! ತೆರಳು. ನಿನಗೆ ಜಯವಾಗಲಿ. (ಹರಸಿ ಕಳುಹಿಸಿಕೊಡುವಳು.)

ದೃಶ್ಯ ೩

(ಹಿಮಾಲಯದ ಶಿಖರ. ಪಾರ್ವತಿಯು ಸಖಿಯರೊಂದಿಗೆ ತಪಸ್ಸಿದ್ಧತೆಯಿಂದ ನಡೆದುಬರುತ್ತಿರುವಳು.)

ಪಾರ್ವತಿ: ಸಖಿ! ತಂದೆಯವರು ಮತ್ತೇನನ್ನು ಹೇಳಿದರು? ಅನಾಯಾಸವಾಗಿ ತಪಸ್ಸಿಗೆ ತಮ್ಮ ಒಪ್ಪಿಗೆಯನ್ನು ಸೂಚಿಸಿದರೆ?

ಸಖಿ: ಹೌದು. ಪಾರ್ವತಿಯ ಮನೋರಥವು ನನಗೆ ಗೊತ್ತು ಎಂದು ಹೇಳಿ "ಫಲೋದಯ"ದ ತನಕ ಅರಣ್ಯವಾಸಕ್ಕೆ ಸಮ್ಮತಿಯನ್ನಿತ್ತರು. ಆದರೆ, ಮಹಾರಾಣಿಯವರು ನಿನ್ನನ್ನು ಇಷ್ಟು ಸುಲಭವಾಗಿ ಈ ಕಷ್ಟಕ್ಕೆ ಬರಗೊಡುವರೇ ಎಂದು ಶಂಕಿಸುತ್ತಿದ್ದೆ.

ಪಾರ್ವತಿ: ಅವಳು ಬರಗೊಡುವಂತೆಯೇ ಇದ್ದಿಲ್ಲ. ಆದರೆ, ನನ್ನ ನಿರ್ಧಾರವನ್ನು ತಿಳಿಸಿ, ಅಮ್ಮನನ್ನು ಸಮಾಧಾನಪಡಿಸಿ, ಆಕೆಯ ಆಶೀರ್ವಾದವನ್ನು ಪಡೆದು ಬಂದೆನು.

ಪಾರ್ವತಿ: ಪ್ರೀತಿಯ ಮುಂದೆ ಎಲ್ಲವೂ ಹಿರಿದಾಗಿಯೇ ತೋರುವುದು ಗೆಳತಿ! (ಸುತ್ತಲೂ ನೋಡಿ) ಎಲ್ಲಿ? ನಾವು ತಪಸ್ಸಿಗೆ ಯೋಗ್ಯವಾದ ಸ್ಥಳವನ್ನು ಹುಡುಕಬೇಕಾಗಿದೆಯಲ್ಲ?

ಸಖಿ: ಅಯ್ಯೋ, ಇಲ್ಲಿಯೂ ಸ್ಥಳವನ್ನು ಹುಡುಕಬೇಕೇ! ಅದೋ ಅಲ್ಲಿ ಕಾಣುತ್ತಿರುವುದೇ ಗೌರೀಶಂಕರ ಶಿಖರ! ಅಲ್ಲಿ ತಪಸ್ಸಿಗೆ ಯೋಗ್ಯವಾದ ಸ್ಥಳವಿದೆ. ಅಲ್ಲಿಗೇ ನಡೆಯೋಣ. (ನಡೆಯುವುದನ್ನುಅಭಿನಯಿಸಿ) ಕುಮಾರೀ, ನೋಡು. ಇದುವೇ ಗೌರಿಶಂಕರ ಶಿಖರ. ಇದು ತಪಸ್ಸಿಗೆ ಯೋಗ್ಯವಾದ ಸ್ಥಳವೆಂದು ನಿನಗೆಯೆ ತಿಳಿಯುವುದಲ್ಲವೆ?

ಪಾರ್ವತಿ: (ಸಂತೋಷದಿಂದ) ಹೌದು. ನೋಡು. ಆ ಮರದ ನೆರಳಲ್ಲಿ ನವಿಲುಗಳು ತಮ್ಮ ಪುಕ್ಕವನ್ನು ಬಿಚ್ಚಿ ಎಷ್ಟು ಅಂದವಾಗಿ ಕುಣಿಯುತ್ತಿವೆ! ಆಹಾ! ಇಲ್ಲಿನ ಸಾಧು ಮೃಗಗಳು ಅತ್ತಿತ್ತ ಓಡಾಡಿ ನಮ್ಮನ್ನು ಸ್ವಾಗತಿಸುವಂತಿವೆ. ಇಲ್ಲಿಯೇ ತಪಸ್ಸನ್ನಾಚರಿಸೆಂದು ನನ್ನ ಮನವೇ ಒಡಂಬಡಿಸುವುದು. ಆದ್ದರಿಂದ ಬೇಕಾದ ಸಿದ್ಧತೆಗಳನ್ನು ಮಾಡು.

ಸಖಿ: (ಹೋಗಿ ಮತ್ತೆ ಬಂದು) ನಿನ್ನ ಅಪ್ಪಣೆಯನ್ನು ನೆರವೇರಿಸುವಂತೆ ಎಲ್ಲಾ ಸಖಿಯರೊಡನೆಯೂ ಹೇಳಿಬಂದೆನು.

ಪಾರ್ವತಿ: ಸರಿ. ಇದೋ ಈ ಹಾರಗಳನ್ನೂ ವಸ್ತ್ರಭೂಷಣಗಳನ್ನೂ ತೆಗೆದಿಡು. ನಾನು ಈ ವಲ್ಕಲಗಳನ್ನು ಉಟ್ಟುಕೊಳ್ಳುವೆನು.

ಸಖಿ: ಹಾಗೆಯೇ ಆಗಲಿ. ಇದೋ, ಈ ಮೂರೆಳೆಯ ಮೌಂಜಿಯನ್ನು ತಂದಿದ್ದೇನೆ. ಅಲ್ಲದೆ ಇದೋ, ಅಕ್ಷಸೂತ್ರವು ತುಟಿಗೆ ಬಣ್ಣ ಲೇಪಿಸುತ್ತಿದ್ದ ಹಾಗೂ ಚೆಂಡಾಡುತ್ತಿದ್ದಾಗ ಎದೆಗೆ ಬಿದ್ದು ಸ್ತನರಾಗದಿಂದ ಕೆಂಪಾದ ಚೆಂಡನ್ನು ಹಿಡಿಯುತ್ತಿದ್ದ ನಿನ್ನ ಅಂಗುಲಿಗಳು ಇನ್ನು ಈ ಅಕ್ಷಸೂತ್ರಗಳಿಂದಲೂ ದರ್ಭೆಗಳಿಂದಲೂ ಶೋಭಿಸಬೇಕಾಗಿವೆ.

ಪಾರ್ವತಿ: ಸಖಿ! ಎಲ್ಲವನ್ನೂ ಇತ್ತ ಕೊಡು. ನಾನಿನ್ನು ಈ ತಪೋವನದ ಶಿಲಾತಲದಲ್ಲಿ ತಪಸ್ಸನ್ನಾಚರಿಸುವೆನು. ನೀವು ಇಲ್ಲಿನ ಇತರ ಕೆಲಸಗಳಲ್ಲಿ ಆಸಕ್ತರಾಗಿರಿ. (ತೆರೆ.)

ದೃಶ್ಯ ೪

(ಗೌರೀಶಂಕರದಲ್ಲಿ ಪಾರ್ವತಿಯ ತಪೋವನ. ತಪೋವನದ ಬಾಗಿಲಿನಲ್ಲಿ ಸಖಿಯು ನಿಂದಿರುವಳು.)

ಸಖಿ: ಎಂತಹ ವಿಪರ್ಯಾಸ! ಗಿರಿರಾಜಕುಮಾರಿಯು ತಪಸ್ಸನ್ನಾಚರಿಸತೊಡಗಿ ಇನ್ನೂ ಒಂದು ವರ್ಷವಾಗಿಲ್ಲ. ಆದರೂ ಅವಳಲ್ಲಿ ಎಂತಹ ಬದಲಾವಣೆಯಾಗಿಬಿಟ್ಟಿದೆ. ಹಾಸಿಗೆಯಲ್ಲುರುಳಿದ ಹೂಗಳಿಂದಲೂ ಬಾಧೆಗೊಳಗಾಗುತ್ತಿದ್ದ ಕುಮಾರಿ ಇಂದು ಕಠಿಣವಾದ ಶಿಲೆಯ ಮೇಲೆ ನಿಶ್ಚಲವಾಗಿ ಕುಳಿತು ತಪಸ್ಸನ್ನಾಚರಿಸುವಳೆಂದರೆ ಯಾರು ತಾನೆ ಆಶ್ಚರ್ಯಪಡಲಿಕ್ಕಿಲ್ಲ? ಓರಣವಾಗಿ ಬಾಚಿ ಹೂಮುಡಿದ ಕೂದಲು ಅವಳ ಮುಖಕ್ಕೆ ಕೊಡುತ್ತಿದ್ದ ಶೋಭೆಯನ್ನು ಜಡೆಗಟ್ಟಿದ ಕೇಶರಾಶಿಯೂ ಇಂದು ಕೊಡುತ್ತಿದೆ. ತುಂಬಿಗಳಿಂದಷ್ಟೇ ಅಲ್ಲ, ಹಾವಸೆಯಿಂದಲೂ ತಾವರೆಯು ಶೋಭಿಸುತ್ತಿದೆಯಂತೆ. ಪಾರ್ವತಿಯ ದೃಷ್ಟಿಯಲ್ಲಿದ್ದ ಅಂದಿನ ಚಂಚಲತೆ, ವಿಲಾಸ ಎರಡೂ ಇಂದು ಮಾಯವಾಗಿ ಅಲ್ಲಿ ನಿಶ್ಚಲತೆಯ ಒಂದು ಅನುಪಮ ಸ್ಥೈರ್ಯವು ಕುಳಿತಂತಿದೆ. ಈ ಎಲ್ಲಾ ಬದಲಾವಣೆಗಳೂ ಆಕೆಯ ಕಾಂತಿಯನ್ನೂ ಗಾಂಭೀರ್ಯವನ್ನೂ ಅಲೌಕಿಕವಾಗಿ ಮಾಡಿವೆ. (ಎಚ್ಚೆತ್ತು) ಓಹೋ, ನಾನು ಸಖಿಯ ಕುರಿತಾದ ಆಲೋಚನೆಯಲ್ಲಿ ಕರ್ತವ್ಯವನ್ನು ಮರೆತಂತಾಯಿತು. ಆಹಾರಕ್ಕಾಗಿ ನನ್ನನ್ನು ಸುತ್ತುಗಟ್ಟುತ್ತಿ

ರುವ ಹರಿಣಗಳಿಗೆ ನೀವಾರವನ್ನು ಕೊಡುವೆನು. (ಎಂದ ಹಾಗೆಯೇ ಮಾಡುತ್ತಿರುವಳು.(ತಾಪಸನೊಬ್ಬನು ಪ್ರವೇಶಿಸುತ್ತಿರುವನು.)

ತಾಪಸ: (ಪ್ರವೇಶಿಸಿ, ಗುರುತಿಸುವವನಂತೆ ಅತ್ತಿತ್ತ ನೋಡುತ್ತ) ಓಹೋ, ಇದು ತಪೋವನವಿರಬೇಕು. ಜಾತಿ ವಿರೋಧವನ್ನುಳಿದ ಮೃಗಗಳು, ನೀರೆರೆದು ಬೆಳೆಸಿದ ಮರಗಿಡಗಳು, ಅವುಗಳ ಮಧ್ಯದಿಂದ ಮೇಲೇಳುತ್ತಿರುವ ಹೋಮ ಧೂಮ, ಎಲ್ಲವೂ ಇದು ತಪೋವನ ಎಂಬುದನ್ನು ಸ್ಪಷ್ಟಪಡಿಸುವಂತಿವೆ. ಇಲ್ಲಿಯೇ ಪಾರ್ವತಿಯು ತಪಸ್ಸು ಮಾಡುತ್ತಿರಬೇಕು. ಈ ತಪೋವನವನ್ನು ನೋಡಿ,ಆತಿಥ್ಯವನ್ನು ಹೊಂದಿ ಮುಂದೆ ನಡೆಯುವೆನು. (ಎಂದು ಮುಂದೆ ಬಂದು ತಪೋವನವನ್ನು ಪ್ರವೇಶಿಸಿ) ಓಂ ನಮಃ ಶಿವಾಯ!

ಸಖಿ: ಅತಿಥಿಗಳಿಗೆ ಸ್ವಾಗತವು. ಈ ಆಸನವನ್ನಲಂಕರಿಸಬೇಕು. (ಎಂದು ಚರ್ಮವನ್ನು ಹಾಸಿ ಸತ್ಕರಿಸುವಳು.)

ತಾಪಸ: (ಕುಳಿತು) ಇದುವೇ ಅಲ್ಲವೇ ಪಾರ್ವತಿಯು ತಪಸ್ಸು ಮಾಡುತ್ತಿರುವ ತಪೋವನವು?

ಸಖಿ: ಅಹುದು. ನಿಮ್ಮಂತಹ ಮುನಿವರ್ಯರ ಆಗಮನದಿಂದ ಇನ್ನೂ ಹುಡುಗಿಯಾದ ಈಕೆಯ ಈ ತಪೋವನವು ಪಾವನವಾದಂತಾಯಿತು.

ತಾಪಸ: ಹುಡುಗಿಯಾದರೇನು? ಧರ್ಮ ವೃದ್ಧರಾದವರಲ್ಲಿ ವಯಸ್ಸು ಲೆಕ್ಕಿಸಲ್ಪಡುವುದೆ? ಈ ತಪೋವನದರ್ಶನದಿಂದ ನಾವೇ ಪುನೀತರಾದಂತಾಯಿತು. ಇರಲಿ, ಪಾರ್ವತಿಯು ತಪಸ್ಸು ವರ್ಧಿಸುತ್ತಿರುವುದೇ?

ಸಖಿ: ಅಹುದು. ತಮ್ಮೆಲ್ಲರ ಆಶೀರ್ವಾದದಿಂದ ಈಕೆ ಇಂದು ಸಾಧನೆಯ ಹಾದಿಯಲ್ಲಿ ನಿಶ್ಚಲಳಾಗಿದ್ದಾಳೆ. "ಆಕೆಯ ಶರೀರ, ಕಾಂಚನ ಪದ್ಮದಿಂದ ನಿರ್ಮಿತವಾಗಿರಬೇಕು. ಇಲ್ಲವಾದರೆ ಚೆಂಡಾಟದಿಂದಲೇ ಆಯಾಸಹೊಂದುತ್ತಿದ್ದ ಆಕೆ ಈ ಮುನಿವ್ರತವನ್ನು ನಿರ್ವರ್ತಿಸುವಂತೆಯೇ ಇರಲಿಲ್ಲ" ಎಂದು ಎಲ್ಲರೂ ಆಡಿಕೊಳ್ಳುತ್ತಿದ್ದಾರೆ.

ತಾಪಸ: ಹಾಗೆಯೇ ಇರಬೇಕು. ಆಕೆ ನಾಲ್ಕು ದಿಕ್ಕುಗಳಲ್ಲಿಯೂ ಬೆಂಕಿಯನ್ನಿಕ್ಕಿ ಮಧ್ಯಾಹ್ನದ ಸೂರ್ಯನನ್ನು ನೆಟ್ಟ ಕಣ್ಣುಗಳಿಂದ ನೋಡುತ್ತಾ ತಪಸ್ಸುಮಾಡುತ್ತಿರುವಳೆಂದು ಕೇಳಿದೆ.

ಸಖಿ: ಹೌದು. ಅವೆರಡರ ಶಾಖದಿಂದ ಆಕೆಯ ಮುಖ ಇಂದು ಕಮಲದ ಕಾಂತಿಯನ್ನು ಹೊಂದುತ್ತಿದೆ. ಇಷ್ಟೇ ಅಲ್ಲ, ಈಗೀಗ ಮರ

ಗಳಂತೆ, ಯಾಚಿಸದೆ, ದೊರೆಯುವ ನೀರೂ ರಸಾತ್ಮಕನಾದ ಉಡುಪತಿಯು ರಶ್ಮಿಗಳಷ್ಟೇ ಆಕೆಯ ಆಹಾರ. ಮಳೆಗಾಲದ ಗಾಳಿ ಮಳೆ ಮಿಂಚುಗಳಿಗೆ ಹೆದರದೆ, ಅವಳು ಶಿಲೆಯ ಮೇಲೆ ಕುಳಿತು ಏಕಾಗ್ರತೆಯಿಂದ ಆ ಪರಮ ಶಿವನನ್ನೇ ಧ್ಯಾನಿಸುತ್ತಿದ್ದಾಳೆ.

ತಾಪಸ: (ಆಶ್ಚರ್ಯದಿಂದ) ಆಹಾ! ತಪಸ್ಸನ್ನಾಚರಿಸುವುದರಲ್ಲಿ ಮಹಾ ಮಹಾ ಮುನಿಗಳನ್ನೂ ಪಾರ್ವತಿ ನಾಚಿಸಿದಂತಾಯಿತೇ!

ಸಖಿ: ಸ್ವಾಮೀ! ತಪಸ್ಸಿನಲ್ಲಿ ಎಂತಹ ಕಠಿಣವಾದ ಕ್ರಮಗಳಿವೆಯೋ ಅವುಗಳೆಲ್ಲವೂ ನಮ್ಮ ಸಖಿಯಿಂದ ಆಚರಿಸಲ್ಪಟ್ಟಿವೆ. ಹೇಮಂತದ ಶೀತ ರಾತ್ರಿಯಲ್ಲಿ ಕುತ್ತಿಗೆ ತನಕ ನೀರಿನಲ್ಲಿ ನಿಂತು ಆಕೆ ತಪಸ್ಸನ್ನಾಚರಿಸಿದ್ದಾಳೆ. ಆಗ ಅವಳ ತುಟಿಗಳು ನಡುಗುತ್ತಿದ್ದುವೇ ವಿನಾ ಚಿತ್ತ ಅಲುಗಾಡಲಿಲ್ಲ. ಅಷ್ಟು ಮನೋಸ್ಥೈರ್ಯ ಆಕೆಗೆ ಇಂದು ಕರಗತವಾಗಿದೆ. ತಾನಾಗಿ ಉದುರಿದ ಎಲೆಗಳನ್ನು ತಿಂದು, ತಪಸ್ಸುಮಾಡುವುದು ತಪಸ್ಸುಗಳ ಪರಾ ಕಾಷ್ಠೆಯಂತೆ. ಅದನ್ನೂ ತ್ಯಜಿಸಿದ್ದಾಳೆ ನಮ್ಮ ಗೆಳತಿ.

ತಾಪಸ: ಓಹೋ, ಮುಂದೆ ಲೋಕವು ಆಕೆಯನ್ನು "ಅಪರ್ಣೆ" ಯೆಂದು ಕರೆಯಬಹುದು.

ಸಖಿ: ಇಷ್ಟಾದರೂ ಆಕೆಗೆ ಫಲಪ್ರಾಪ್ತಿಯಾಗಲಿಲ್ಲ. ಬಯಸಿದರೆ ದೊರೆಯದ ಶಿವ ಇನ್ನೂ ಯಾವಾಗ ನಮ್ಮ ಗೆಳತಿಗೆ ಒಲಿಯುವನೋ!

ತಾಪಸ: ತಪಸ್ಸಿನಲ್ಲಿ ಹಠಕ್ಕಿಂತಲೂ ತಾಳ್ಮೆಗೆ ಪ್ರಾಧಾನ್ಯ ಹೆಚ್ಚು. ಭಕ್ತರಿಗೆ ಪರಮಾತ್ಮ ಎಂದಿಗೂ ಒಲಿಯದಿರಲಾರನು. (ಆಸನದಿಂದೆದ್ದು) ಇರಲಿ, ನನಗೆ ಹೊತ್ತಾಯಿತು. ಇಲ್ಲಿ ಆತಿಥ್ಯವನ್ನು ಹೊಂದಿ, ಈ ಪುಣ್ಯಾಶ್ರಮದ ದರ್ಶನದಿಂದ ಕೃತಾರ್ಥನಾದೆನು. ಇನ್ನು ನಾನು ಹೊರಡಲೇ?

ಸಖಿ: ಆಗಲಿ. ಆದರೆ ಈ ಬಡವರನ್ನು ಎಂದಿಗೂ ಮರೆಯಬಾರದು.

ತಾಪಸ: ಹಾಗೆಯೇ ಆಗಲಿ. ಜಯ ಶಂಕರ ಮಹಾದೇವ! (ತೆರೆ.)

ದೃಶ್ಯ ೫

(ತಪೋವನ. ಒಂದು ಕಡೆ ಪಾರ್ವತಿಯೂ ಸಖಿಯೂ ಕುಳಿತಿರುವರು. ಶಿವನು ಬ್ರಹ್ಮಚಾರಿಯ ವೇಷದಿಂದ ಪ್ರವೇಶಿಸುವನು.)

ಬ್ರಹ್ಮಚಾರಿ: ಇದುವೇ ಇರಬೇಕು ಪಾರ್ವತಿಯ ತಪೋವನ. ಅದೋ ಅಲ್ಲಿ ದೀರ್ಘ ತಪಸ್ಸಿನ ಅಲೌಕಿಕಗಾಂಭೀರ್ಯದಿಂದ ಶೋಭಿಸುತ್ತಾ ತನ್ನ

ಗೆಳತಿಯೊಂದಿಗೆ ಕುಳಿತಿರುವ ಅವಳೇ ಅಲ್ಲವೆ ಪಾರ್ವತಿ? ಇಂದು ತಪಸ್ವಿನಿಯಾದರೂ ಆಕೆ ಎಷ್ಟು ಚೆಲುವಾಗಿ ತೋರುತ್ತಾಳೆ! ಆಕೆಯ ಈ ಸೌಂದರ್ಯ, ಧೈರ್ಯ, ಸ್ಥೈರ್ಯಗಳಿಗೆ ಒಲಿಯದಿದ್ದುದು ನನ್ನ ತಪ್ಪು ಅಲ್ಲವೆ? ಇರಲಿ. ಇದೇ ವೇಷದಿಂದ ಅಲ್ಲಿ ಹೋಗಿ ಆಕೆಯನ್ನು ಸಾಕಷ್ಟು ಪರೀಕ್ಷಿಸುವೆನು. (ಎಂದು ಮುಂದೆ ನಡೆದು ಆಶ್ರಮವನ್ನು ಪ್ರವೇಶಿಸಿ) ಹರ, ಹರ, ಮಹಾದೇವ!

ಪಾರ್ವತಿ: (ಎದ್ದು ವಿನಯಪೂರ್ವಕ) ಅತಿಥಿವರ್ಯರು ಹೀಗೆ ದಯಮಾಡಿಸಬೇಕು. (ಸಖಿಯೊಡನೆ) ಸಖಿ! ಅತಿಥಿವರ್ಯರನ್ನು ಸತ್ಕರಿಸುವುದಕ್ಕೆ ಬೇಕಾದ ಸಲಕರಣೆಗಳನ್ನು ತೆಗೆದುಕೊಂಡು ಬಾ.

ಬ್ರಹ್ಮಚಾರಿ: (ಕುಳಿತುಕೊಂಡು ನಸುನಕ್ಕು) ನಿಮ್ಮ ಮಾತುಗಳಿಂದಲೇ ಸತ್ಕರಿಸಲ್ಪಟ್ಟೆನು. ಇನ್ನು ಬೇರೆ ಸತ್ಕಾರಗಳೇತಕ್ಕೆ?

ಪಾರ್ವತಿ: ತಪೋವನಕ್ಕೆ ಬಂದ ಅತಿಥಿಗಳನ್ನು ಸತ್ಕರಿಸುವುದು ನಮ್ಮ ಧರ್ಮವಲ್ಲವೇ ಸ್ವಾಮಿ?

ಬ್ರಹ್ಮಚಾರಿ: ಅಹುದು; ನಿಮ್ಮಿಷ್ಟದಂತೆಯೇ ಆಗಲಿ. (ಸಖಿ ಸಲಕರಣೆಗಳನ್ನು ತರುವಳು. ಇಬ್ಬರೂ ಕೂಡಿ ಅತಿಥಿಯನ್ನು ಸತ್ಕರಿಸುವರು.)

ಪಾರ್ವತಿ: ನಿಮ್ಮ ಪಾದಧೂಳಿಯಿಂದ ನಮ್ಮ ಆಶ್ರಮವು ಪವಿತ್ರವಾಯಿತು. ಅತಿಥಿಗಳಿಗೆ ಸುಖಾಗಮವೆ?

ಬ್ರಹ್ಮಚಾರಿ: ಅಹುದು, ನಿನ್ನ ತಪಸ್ಸು ವರ್ಧಿಸುತ್ತಿರುವುದೆ?

ಪಾರ್ವತಿ: ನಿಮ್ಮ ಆಶೀರ್ವಾದ ಬಲದಿಂದ ಎಲ್ಲವೂ ಸುಖವಾಗಿಯೇ ನೆರವೇರುತ್ತಿದೆ.

ಬ್ರಹ್ಮಚಾರಿ: ವ್ರತಾಚರಣೆಗೆ ಬೇಕಾದ ಸಮಿತ್ತುಗಳೂ ಸ್ನಾನಕ್ಕೆ ಬೇಕಾದ ನೀರೂ ಇಲ್ಲಿ ಧಾರಾಳವಾಗಿ ದೊರೆಯುವುವೆ? ನಿನ್ನ ಶಕ್ತಿಗನುಸಾರವಾಗಿ ತಪಸ್ಸು ಮಾಡುತ್ತಿರುವೆಯಷ್ಟೆ? ಧರ್ಮವನ್ನು ಸಾಧಿಸುವುದಕ್ಕೆ ಶರೀರವೇ ಮೊದಲಿನ ಸಾಧನವಾದುದರಿಂದ ಹಾಗೆ ಕೇಳಿದೆ.

ಪಾರ್ವತಿ: ತಪಸ್ಸಿಗೆ ಬೇಕಾದ ಎಲ್ಲಾ ಸಾಮಗ್ರಿಗಳೂ ಇಲ್ಲಿ ದೊರೆಯುತ್ತಿವೆ. ನನ್ನ ಶಕ್ತ್ಯನುಸಾರವಾಗಿಯೇ ತಪಸ್ಸನ್ನು ಆಚರಿಸುತ್ತಿರುವೆನು.

ಬ್ರಹ್ಮಚಾರಿ: ಸಂತೋಷ. ಅಲಕ್ತಕ ರಸದ ಲೇಪವಿಲ್ಲದೆಯೂ ಕೆಂಪಾಗಿರುವ ನಿನ್ನ ತುಟಿಗಳನ್ನು ಅನುಕರಿಸುತ್ತಿರುವ ಚಿಗುರುಗಳುಳ್ಳ ಈ ಬಳ್ಳಿಗಳೂ ನಿನ್ನ ಕೈಯಲ್ಲಿರುವ ದರ್ಭೆಯನ್ನು ನಿಶ್ಶಂಕೆಯಿಂದ ಎಳೆಯು

ತ್ತಿರುವ ಹರಿಣಗಳೂ ನಿನ್ನ ಬಹುಕಾಲದ ತಪಸ್ಸನ್ನು ಹೇಳದೆಯೇ ಸೂಚಿಸುತ್ತಿವೆ. ನಿನ್ನ ಶೀಲವು ತಪಸ್ವಿಗಳಿಗೂ ಕೂಡ ಆದರ್ಶಪ್ರಾಯವಾದುದು. ಇಂತಹವುಗಳನ್ನು ಪಡೆದ ಹಿಮಾಲಯನು ನಿಜವಾಗಿಯೂ ಧನ್ಯನೇ ಅಲ್ಲವೆ? ಧರ್ಮಾರ್ಥ ಕಾಮಗಳಲ್ಲಿ ಧರ್ಮವನ್ನೇ ನೀನು ಆರಿಸಿಕೊಂಡಿರುವುದರಿಂದ, ಅದುವೇ ತ್ರಿವರ್ಗಗಳಲ್ಲಿ ಮೇಲು ಎಂಬುದಾಗಿ ನಾನು ತಿಳಿದುಕೊಳ್ಳಲೆ?

ಪಾರ್ವತಿ: ನಿಮ್ಮಂತಹ ಮಹಾತ್ಮರೂ ನನ್ನಿಂದ ಕಲಿಯಬೇಕಾದುದಿದೆಯೇ ಸ್ವಾಮಿ? ನಾವೇ ನಿಮ್ಮಂತಹ ಸುಜ್ಞಾನಿಗಳ ಪಥವನ್ನು ಅನುಸರಿಸುತ್ತಿರುವವರು. ಇರಲಿ. ನೀವು ನನ್ನಲ್ಲಿ ತೋರಿದ ದಯೆಗೆ ಕೃತಜ್ಞಳಾಗಿದ್ದೇನೆ. ಆದ್ದರಿಂದ ತಾವು ಬಂದ ಕಾರ್ಯವಾವುದು, ದಯಮಾಡಿ ತಿಳಿಸುವಿರಾ?

ಬ್ರಹ್ಮಚಾರಿ: ನಾನು ನಿಮ್ಮನ್ನು ನೋಡಿ ಹೋಗುವ ಉದ್ದೇಶದಿಂದಷ್ಟೇ ಬಂದೆನು. ಆದರೂ ಇಲ್ಲಿ ನಿನ್ನನ್ನು ಕಂಡ ನಂತರ ನಿನ್ನೊಡನೆ ಕೆಲವು ವಿಷಯಗಳನ್ನು ವಿಚಾರಿಸುವುದಕ್ಕೆ ಮನಸ್ಸು ಬಯಸುತ್ತಿದೆ. ಬ್ರಾಹ್ಮಣನಾದ ನನ್ನಲ್ಲಿ ಸ್ವಭಾವತಃ ಉಂಟಾಗುತ್ತಿರುವ ಚಾಪಲ್ಯವು ನನ್ನ ಈ ಬಯಕೆಯನ್ನು ಪ್ರೇರೇಪಿಸುತ್ತಲೇ ಇದೆ. ಸಪ್ತಪದೋಚ್ಚಾರದಿಂದಲೇ ಸಖ್ಯವು ಸಾಧ್ಯವಾಗಬಲ್ಲುದೆಂದು ವಿದ್ವಾಂಸರು ಹೇಳುತ್ತಾರೆ. ಹಾಗಿರುವಾಗ ನಿನ್ನಿಂದ ಸತ್ಕಾರವನ್ನೂ ಕೂಡ ಹೊಂದಿದ ನಾನು ಬೇರೆಯವನಾಗುವುದಿಲ್ಲ. ಆದ್ದರಿಂದ ನಾನು ನಿನ್ನವನೇ ಎಂದು ತಿಳಿದು ನಾನು ಕೇಳಲಿರುವ ಕೆಲವು ಮಾತುಗಳನ್ನು—ರಹಸ್ಯವಿಲ್ಲದಿದ್ದಲ್ಲಿ— ನೀನು ಉತ್ತರಿಸಬೇಕು. ಹೇಗೆ, ಸಾಧ್ಯವೇ?

ಪಾರ್ವತಿ: ಪೂಜ್ಯರೇ, ಬ್ರಹ್ಮಚಾರಿಗಳಾದ ತಾವು ನನ್ನೊಡನೆ ತಮ್ಮ ವಿವಕ್ಷೆಯನ್ನು ಪ್ರಶ್ನಿಸುವುದರಲ್ಲಿ ಯಾಕೆ ಇಷ್ಟು ಹಿಂದೆ ಮುಂದೆ ನೋಡಬೇಕು? ಸಂಕೋಚಪಟ್ಟುಕೊಳ್ಳಬೇಕು? ದೇವಸಮಾನರಾದ ಅತಿಥಿಗಳು ತಿಳಿಯಬಯಸಿದುದನ್ನು ಗೊತ್ತಿದ್ದೂ ತಿಳಿಯಪಡಿಸದಿದ್ದರೆ ನಾನು ನಿಮ್ಮ ಮನ ನೋಯಿಸಿದಂತೆ ಆಗುವುದಿಲ್ಲವೇ? ಆದ್ದರಿಂದ ನಿಮಗೆ ಕೇಳಿರುವುದನ್ನು ನಿಸ್ಸಂದೇಹವಾಗಿ ಕೇಳಿರಿ.

ಬ್ರಹ್ಮಚಾರಿ: ಮೊದಲನೆಯದಾಗಿ ನೀನು ತಪಸ್ಸುಮಾಡುತ್ತಿರುವ

ಉದ್ದೇಶವೇ ನನ್ನೆಣಿಕೆಗೆ ನಿಲುಕುವಂತಿಲ್ಲ. ಉತ್ತಮ ಕುಲದಲ್ಲಿ ರೂಪವತಿಯೂ, ಐಶ್ವರ್ಯವತಿಯೂ ಆಗಿ ಹುಟ್ಟಿದ ನಿನಗೆ ತಪಸ್ಸಿನ ಕಷ್ಟವೇಕೆ? ಸಹಿಸಲಾರದ ದುಃಖಕ್ಕೆ ಭಾಗಿಗಳಾದ ಮನಸ್ವಿನಿಯರು ಈ ರೀತಿ ತಪಸ್ಸು ಮಾಡುವುದಿದೆಯೇ ಹೊರತು; ನಿನ್ನಂತಹ ಸುಖ ಸಂತೋಷದಲ್ಲಿ ಬಳೆದ ತರುಣಿಯರು ಈ ಕಷ್ಟಕ್ಕೆ ಮನಸ್ಸುಮಾಡುವುದು ನೂತನವಾಗಿದೆ. ಈ ರೀತಿ ತಪಸ್ಸುಮಾಡಬೇಕಾದರೆ ತಂದೆಯ ಮನೆಯಲ್ಲಿ ಅವಮಾನವಾಗುತ್ತಿರಬೇಕು. ಆದರೆ,ನಿನಗೆ ಆ ಕಷ್ಟವೇನೂ ಕಂಡುಬರುವುದಿಲ್ಲ. ಹೀಗಿದ್ದೂ ಆಭರಣವನ್ನು ತೊಡೆದುಹಾಕಿ ಈ ಯೌವನದಲ್ಲಿ ವಲ್ಕಲಗಳನ್ನು ಯಾಕಾಗಿ ಧರಿಸಿರುವೆ? ಚಂದ್ರ ತಾರೆಗಳಿಂದ ಶೋಭಿಸುತ್ತಿರುವ ರಾತ್ರಿ ಎಂದಾದರೂ ಅರುಣೋದಯವನ್ನು ಬಯಸಬಹುದೆ? ತಪಸ್ವಿನಿ! ಆಲೋಚಿಸಿ ನೋಡು. (ಆಲೋಚಿಸಿ) ಅಥವಾ ನೀನು ತಪಸ್ಸಿನಿಂದ ಸ್ವರ್ಗವನ್ನು ಹೊಂದಬಯಸುತ್ತಿರಬಹುದೆ? ಛೆ! ಹಾಗಿರಲಾರದು. ಯಾಕೆಂದರೆ ನಿನ್ನ ತಂದೆಯ ಪ್ರದೇಶಗಳು ದೇವಭೂಮಿಗಳೇ ಆಗಿವೆಯಲ್ಲವೆ? ಮದುವೆಯಾಗುವುದಕ್ಕೆ ಯೋಗ್ಯನಾದ ವರನನ್ನು ಪಡೆಯುವುದು ನಿನ್ನ ಈ ಕಷ್ಟ ತಪಸ್ಸಿನ ಗುರಿಯೆ? ಹಾಗಿದ್ದರೆ, ತಪಸ್ವಿನಿ! ನಿನ್ನ ತಪಸ್ಸನ್ನು ಇಂದೇ ನಿಲ್ಲಿಸು. ರತ್ನವೇ ಹುಡುಕಲ್ಪಡುವುದಲ್ಲದೆ ರತ್ನವು ತನ್ನ ಗ್ರಾಹಕರನ್ನು ಹುಡುಕುವುದು ಎಂದಾದರೂ ಇದೆಯೆ? ಹೇಳು. ಯಾಕೆ ಈ ಮೌನದ ಬಿಗುಹು? ನನ್ನ ಪ್ರಶ್ನೆಗಳಿಗೆ ಯಾವ ಉತ್ತರವನ್ನು ಹೇಳುವೆ? ತಿಳಿಸು.

ಪಾರ್ವತಿ: (ಸ್ವಗತ) ಪೂಜ್ಯರು ನನ್ನ ಮನಸ್ಸನ್ನು ಕೆಣಕಿ ನನ್ನ ಮನೋರಥವನ್ನು ತಿಳಿಯುವುದಕ್ಕೆ ಪ್ರಯತ್ನಿಸುವಂತೆ ತೋರುತ್ತಿದೆಯಲ್ಲ! ಇವರಿಗೆ ಯಾವ ಉತ್ತರವನ್ನು ಹೇಳಲಿ? (ನಿಟ್ಟುಸಿರು ಬಿಡುವಳು.)

ಬ್ರಹ್ಮಚಾರಿ: ಓಹೋ, ಹೀಗೆಯೇ? ನಿನ್ನ ದುಃಖದ ನಿಟ್ಟುಸಿರಿನಿಂದ ನೀನು ವರಾಕಾಂಕ್ಷಿಯಾಗಿ ತಪಸ್ಸು ಮಾಡುತ್ತಿರುವೆಯೆಂದು ತಿಳಿದೆನು. ಆದರೂ ನನ್ನ ಮನಸ್ಸು ಸಂಶಯ ತಾಳುತ್ತಿದೆ. ನೀನು ಪ್ರಾರ್ಥಿಸತಕ್ಕ ವರನು ಈ ಲೋಕದಲ್ಲಿ ಇರುವನೆ? ಒಂದು ವೇಳೆ ಪ್ರಾರ್ಥಿಸಿದರೂ ಅವನು ಹೇಗೆ ತಾನೇ ನಿನಗೆ ದುರ್ಲಭನಾಗಬಲ್ಲನು? ಆಹಾ! ನೀನು ಮೆಚ್ಚಿದ ಆ ಯುವಕನು ನಿಜವಾಗಿಯೂ ಕಠಿಣ ಹೃದಯಿಯೇ ಇರಬೇಕು. ಏಕೆಂದರೆ ಹಗಲಿನಲ್ಲಿ ಬಾಡಿದ ಚಂದ್ರನಂತಹ ಮುಖವುಳ್ಳ ನಿನ್ನನ್ನು ನೋಡಿ ಯಾವನ

ಮನಸ್ಸು ತಾನೇ ಕರಗದಿರಲಾರದು? ಕರ್ಣೋತ್ಪಲಗಳು ತೂಗಾಡಬೇಕಾದ ನಿನ್ನ ಕಪೋಲಗಳಲ್ಲಿ ಯಾರು ತಾನೇ ಈ ಪಿಂಗಲ ಜಟೆಗಳನ್ನು ಬಯಸಬಹುದು? ಆದ್ದರಿಂದ, ತಪಸ್ವಿನಿ! ನೀನು ಬಯಸುವ ಆ ಯುವಕನು ತಾನೆ ಸುಂದರನೆಂಬ ಹೆಮ್ಮೆಯಿಂದ ಬೀಗಿದವನಿರಬೇಕು. ಹಾಗಿಲ್ಲದಿದ್ದರೆ ಅವನು ಎಂದೋ ಜಗನ್ಮೋಹಿನಿಯಾದ ನಿನ್ನ ಸಮ್ಮುಖದಲ್ಲಿ ಉಪಸ್ಥಿತನಾಗುತ್ತಿದ್ದನು. ಈ ಅವಸ್ಥೆಯಲ್ಲಿ ಇನ್ನೆಷ್ಟು ಕಾಲ ಆ ನಿರ್ದಯಿ ಯುವಕನಿಗಾಗಿ ತಪಸ್ಸು ಮಾಡುತ್ತಿರುವೆ? ಜಾಣೇ, ಛಲವನ್ನು ನಿಲ್ಲಿಸು. ಇದೋ ನನ್ನಿಂದ ಬ್ರಹ್ಮಚರ್ಯದಲ್ಲಿ ಉಪಾರ್ಜಿತವಾದ ತಪವಿದೆ. ಅದರ ಅರ್ಧ ಭಾಗದಿಂದ ನಿನಗೆ ಬೇಕಾದ ವರನನ್ನು ಹೊಂದಿ ಸುಖವಾಗಿ ಮನೆಗೆ ಹೋಗು. ಕೋಮಲಾಂಗೀ, ಈ ಕಷ್ಟದಲ್ಲಿ ನೀನು ತೊಳಲಾಡುವುದನ್ನು ನಾನು ನೋಡಲಾರೆ.

ಪಾರ್ವತಿ: ಅಯ್ಯೋ, ಇವರ ಪ್ರಶ್ನೆಗಳಿಗೆ ಉತ್ತರವೀಯುವೆನೆಂದು ಯಾಕೆ ನಾನು ಒಪ್ಪಿಕೊಂಡೆನು? ನಾಚಿಗೆಗೆಟ್ಟು ಈ ಮಾತುಗಳನ್ನು ಹೇಗೆ ತಾನೇ ಉತ್ತರಿಸಲಿ? (ಆಲೋಚಿಸಿ) ಇರಲಿ. ಸಖಿಯೊಡನೆ ನನ್ನ ಮನೋಗತವನ್ನು ಇವನಿಗೆ ತಿಳಿಸುವಂತೆ ಹೇಳುವೆನು. (ಪ್ರಕಾಶ) ಗೆಳತಿ! ಈ ಬ್ರಹ್ಮಚಾರಿಗೆ ನನ್ನ ಮನೋಗತವನ್ನು ತಿಳಿಸಿ ಸಂದೇಹವನ್ನು ನಿವಾರಿಸು.

ಸಖಿ: ಹಾಗೆಯೇ ಆಗಲಿ. (ಬ್ರಹ್ಮಚಾರಿಯೊಡನೆ) ಪೂಜ್ಯರೇ! ಬಿಸಿಲಿನಲ್ಲಿನ ತಾವರೆಯಂತೆ ಸಖಿಯು ಈ ಪ್ರಾಯದಲ್ಲಿ ಯಾಕೆ ತಪಸ್ಸು ಮಾಡುತ್ತಿದ್ದಾಳೆ ಎಂಬುದನ್ನು ನಾನೇ ನಿಮಗೆ ತಿಳಿಸುವೆನು.

ಬ್ರಹ್ಮಚಾರಿ: ನೀನೇ ತಿಳಿಸು.

ಸಖಿ: ಪೂಜ್ಯರೇ! ನಮ್ಮ ಗೆಳತಿಯು ಇಂದ್ರಾದಿ ದೇವತೆಗಳನ್ನುಳಿದು ಆ ಪರಶಿವನನ್ನೇ ಪತಿಯನ್ನಾಗಿ ಪಡೆಯುವುದಕ್ಕೆ ಬಯಸುತ್ತಿದ್ದಾಳೆ. ಅಂದು ಕಾಮನು ಶಿವನಿಗೆ ಬಿಟ್ಟ ಬಾಣ ಹಿಂತಿರುಗಿ ಬಂದು ಪಾರ್ವತಿಯ ಹೃದಯದಲ್ಲಿ ನೆಟ್ಟಿತೆಂದು ತೋರುವುದು. ಅಂದಿನಿಂದ ಆಕೆ ತಂದೆಯ ಮನೆಯಲ್ಲಿ ವಿರಹತಾಪದಿಂದ ವಿಧವಿಧವಾಗಿ ಕಷ್ಟಪಡತೊಡಗಿದಳು. ಕಾಮನನ್ನು ಶಿವನು ಸುಟ್ಟ ಮೇಲೆ ತನ್ನೀ ರೂಪದಿಂದ ನಮ್ಮ ಸಖಿಯು ಅವನನ್ನು ಹೊಂದುವುದು ಸಾಧ್ಯವಿಲ್ಲವೆಂದು ನೆನೆದು, ಇಂದು ಇಲ್ಲಿ ಬಂದು ಘೋರವಾದ ತಪಸ್ಸನ್ನಾಚರಿಸುತ್ತಿದ್ದಾಳೆ. ಕಿನ್ನರ ರಾಜಪುತ್ರಿಯರ ಗಾಯನದಲ್ಲಿ ಆ ಪಿನಾಕಿಯ ಹೆಸರು ಕೇಳಿದರೇ ಆಕೆಗೆ ಕಂಠವುಬ್ಬಿ ಬರುವುದು.

ರಾತ್ರಿ ಕನಸಿನಲ್ಲಿಯೂ ಆಕೆಯ ಕಣ್ಣೆದುರು ಶಿವನದೇ ಮೂರ್ತಿಯು ನಲಿಯುತ್ತಿರುತ್ತದೆ. "ನೀನು ಎಲ್ಲ ಕಡೆಗಳಲ್ಲಿಯೂ ಇರುವೆಯಾದರೆ ನಿನ್ನನ್ನೆ ನಂಬಿದ ಈ ಭಕ್ತಳಿಗೆ ಯಾಕೆ ಒಲಿಯುವುದಿಲ್ಲ"ವೆಂದು ಆಕೆ ತಾನೇ ಚಿತ್ರಿಸಿದ ಶಿವನೊಡನೆ ಕಾಡುತ್ತಿದ್ದಾಳೆ. ಆದರೆ, ಇನ್ನೂ ಆ ಶಿವನು ಆಕೆಗೆ ಒಲಿದಂತೆ ತೋರುವುದಿಲ್ಲ. ಕುಮಾರಿಯು ನೆಟ್ಟ ಗಿಡ ಮರಗಳು ಹಣ್ಣು ಬಿಟ್ಟರೂ, ಆಕೆಯು ಶಿವನನ್ನು ಹೊಂದುವ ಮನೋರಥದ ಚಿಗುರೇ ಕಾಣಿಸುವಂತಿಲ್ಲ. ಈ ಕಷ್ಟದಲ್ಲಿ ನವೆಯುತ್ತಿರುವ ಸಖಿಗೆ ಅವನು ಎಂದು ಒಲಿಯುವನೋ ಎಂದು ನಾವು ಕೌತುಕದ ಕಣ್ಣುಗಳಿಂದ ಹಾರೈಸುತ್ತಿದ್ದೇವೆ.

ಬ್ರಹ್ಮಚಾರಿ: (ಪಾರ್ವತಿಯೊಡನೆ ನಸುನಕ್ಕು) ಎಲೌ ಸಾಧ್ವಿ! ನಿನ್ನ ತಪಸ್ಸಿನ ಪರಿಹಾಸವು ಈ ರೀತಿಯಾಗಿದೆಯೋ?

ಪಾರ್ವತಿ: (ತುದಿಬೆರಳುಗಳಲ್ಲಿ ಅಕ್ಷಮಾಲಿಕೆಯನ್ನು ತಿರುಗಿಸುತ್ತಾ) ಹೌದು, ಪೂಜ್ಯರೇ! ಈ ಗೆಳತಿಯು ಹೇಳಿದಂತೆ ನಾನು ಅಲಭ್ಯ ವಸ್ತುವಿಗೆ ಕೈನೀಡುತ್ತಿದ್ದೇನೆ. ಅದನ್ನು ಹೊಂದುವುದಕ್ಕಿರುವುದು ಈ ತಪಸ್ಸು! ಮನುಷ್ಯನ ಮನೋರಥಗಳಿಗೆ ಅವಿಷಯವಾದುದೇ ಇಲ್ಲವಲ್ಲವೆ?

ಬ್ರಹ್ಮಚಾರಿ: (ಸ್ವಗತ) ಇವಳು ಮನಸ್ವಿನಿಯಾಗಿ ತೋರುತ್ತಿದ್ದಾಳೆ. ಆದರೂ ಈಕೆಯ ಮನೋಗತ ಧೈರ್ಯವನ್ನು ಇನ್ನೂ ಪರೀಕ್ಷಿಸಬೇಕಿದೆ. (ಪ್ರಕಾಶ) ತಪಸ್ವಿನಿ! ನೀನು ಆ ಮುಕ್ಕಣ್ಣನಲ್ಲಿ ಯಾವ ಅಂದವನ್ನು ಕಂಡು ಆತನನ್ನು ಹೊಂದಬಯಸುತ್ತಿರುವೆ, ಹೇಳು. ಯಾವಾಗಲೂ ಅಮಂಗಲದಲ್ಲೇ ಪ್ರೀತಿಯುಳ್ಳ ಆತನನ್ನು ಹೊಂದುವ ನಿನ್ನ ಅಭಿಲಾಷೆಯನ್ನು ನಾನೆಂದಿಗೂ ಅನುಮೋದಿಸಲಾರೆ. ಸರ್ಪಗಳನ್ನು ಸುತ್ತಿರುವ ಆತನ ಕೈಯ ಮೊದಲ ಹಿಡಿತವನ್ನು ನಿನ್ನ ಈ ಮೃದು ಹಸ್ತವು ಹೇಗೆ ತಾನೇ ಸಹಿಸಬಲ್ಲುದು? ರಕ್ತ ಬಿಂದುಗಳು ಸುರಿಯುತ್ತಿರುವ ಗಜಾಜಿನವೂ ಕಲಹಂಸ ಲಕ್ಷಣವುಳ್ಳ ನಿನ್ನ ವಧೂ ದುಕೂಲವೂ ಎಂದಾದರೂ ಸೇರ್ಪಡೆಯಾಗಬಹುದೇ? ಆಲೋಚಿಸಿ ನೋಡು.

ಪಾರ್ವತಿ: ಪೂಜ್ಯರೇ! ಪ್ರೀತಿಯು ಪ್ರೀತಿಸತಕ್ಕ ವಸ್ತುವಿನ ಗುಣವನ್ನೂ ಅಂದವನ್ನೂ ಹೊಂದಿಕೊಂಡು ಉಂಟಾಗುವುದಿಲ್ಲವಲ್ಲ? ಹೃದಯದಲ್ಲಡಗಿರುವ ಅಗೋಚರ ಶಕ್ತಿಯೊಂದು ಒಂದು ಇನ್ನೊಂದನ್ನು ಪ್ರೀತಿಸುವಂತೆ ಮಾಡುತ್ತದೆ. ಆದರೆ, ನನ್ನ ಹೃದಯವು ಆ ಶಿವನಲ್ಲಿ ನೆಲೆಗೊಂಡುದು

ಆತನ ಮಹಿಮೆಯಿಂದಲೂ ಹೌದು. ಆವನಲ್ಲಿ ಯಾವುದಕ್ಕೆ ಕಡಿಮೆಯಿದೆ? ಅವನು ಗಜಾಜಿನಧಾರಿಯಾಗಿರಲಿ, ದುಕೂಲವನ್ನೇ ಉಟ್ಟಿರಲಿ, ಸರ್ಪಗಳನ್ನು ಸುತ್ತಿರಲಿ ಅಥವಾ ಆಭರಣಗಳಿಂದ ಶೋಭಿಸುತ್ತಿರಲಿ, ಹೇಗಿದ್ದರೂ ವಿಶ್ವಮೂರ್ತಿಯಾದ ಆತನ ರೂಪವನ್ನು ಹೀಗೆಯೇ ಎಂದು ನಿರ್ಣಯಿಸಬರುವುದೇ?

ಬ್ರಹ್ಮಚಾರಿ: ಇರಬಹುದು. ಆದರೆ, ಯಾವಾಗಲೂ ಅಮಂಗಲದಲ್ಲಿಯೇ ಆಸಕ್ತನಾದ ಆತನು ಶ್ಮಶಾನದಲ್ಲೇ ವಾಸಿಸುತ್ತಿರುವುದು ನಿಜವಲ್ಲವೇ? ಅಲಕ್ತಕ ರಸದಿಂದ ಕೆಂಪಾಗಿದ್ದ ನಿನ್ನ ಮೃದು ಪಾದಗಳು ಇನ್ನು ಆ ಮಸಣದ ಕೇಶರಾಶಿಯನ್ನು ಹೇಗೆ ತುಳಿಯಬಲ್ಲವು, ಸುಮಂಗಲೇ?

ಪಾರ್ವತಿ: ವಿಪತ್ತಿಗೆ ಪ್ರತೀಕಾರ ಮಾಡಲೆಳಸುವವರೂ, ಐಶ್ವರ್ಯವನ್ನು ಹೊಂದಬಯಸುವವರೂ ಮಂಗಲಾಸಕ್ತರಾಗಿರುತ್ತಾರೆ. ಆದರೆ ಜಗಚ್ಛರಣ್ಯರೂ, ನಿರಾಶಿಶರೂ ಆದ ಸಜ್ಜನರು ಇದಕ್ಕೆ ವಿರೋಧಿಗಳು. ಹೀಗಿರುವಾಗ ತ್ರಿಲೋಕನಾಥನಾದ ಶಿವನು ಶ್ಮಶಾನವಾಸಿಯಾದುದರಲ್ಲಿ ತಪ್ಪೇನು? ಪತಿಯ ಸಾನಿಧ್ಯದಲ್ಲಿ ಸತಿಯು ಮಸಣದ ಕೇಶರಾಶಿಯ ಮೇಲೆ ನಡೆಯುವ ಅಲ್ಪ ಕಷ್ಟವನ್ನು ಸಹಿಸಲಾರಳೆ?

ಬ್ರಹ್ಮಚಾರಿ: ಇರಲಿ. ಆ ವಿರೂಪಾಕ್ಷನ ಹೃದಯವು ಒಂದು ವೇಳೆ ನಿನಗೆ ಒಲಿದರೂ ಹರಿಚಂದನಾಸ್ಪದವಾಗಿದ್ದ ಈ ಸ್ತನದ್ವಯಗಳಿಗೆ ಇನ್ನು ಚಿತಾಭಸ್ಮಲೇಪವಾಗುವುದಲ್ಲವೇ? ಇದಕ್ಕಿಂತ ಹೆಚ್ಚಿನ ಅಪಮಾನವು ಬೇರೆ ಇದೆಯೇ?

ಪಾರ್ವತಿ: ಪೂಜ್ಯರೇ, ಆತನ ಅಂಗಾಂಗಗಳಲ್ಲಿನ ಚಿತಾಭಸ್ಮವು ಎಂತಹ ಪಾಪಿಯನ್ನಾದರೂ ಶುದ್ಧನನ್ನಾಗಿ ಮಾಡುತ್ತದೆ ಎಂಬ ಸತ್ಯ ನಿಮಗೆ ತಿಳಿಯದೆ? ಅಂತಿರುವುದರಿಂದಲೇ ಅಲ್ಲವೆ ಆವನು ನರ್ತಿಸುತ್ತಿರುವಾಗ ಉದುರಿದ ಭಸ್ಮವನ್ನು ದೇವತೆಗಳು ತಲೆಗೆ ಹಾಕಿಕೊಳ್ಳುವುದು? ಅದೇ ವಿಭೂತಿಯಿಂದ ಈ ಪಾಮರಳು ಪವಿತ್ರಳಾಗಬಾರದೇಕೆ?

ಬ್ರಹ್ಮಚಾರಿ: (ಸ್ವಗತ) ಈಕೆಯು ನನ್ನ ಮಾತನ್ನೇ ತಡೆಯುವುದಕ್ಕೆ ಬಯಸುತ್ತಿದ್ದಾಳೆ. ಇರಲಿ. ಇನ್ನೂ ಇವಳನ್ನು ಪರೀಕ್ಷಿಸಬೇಕು. (ಪ್ರಕಾಶ) ಎಲೌ ಸಂಧ್ವಿಯೇ, ಆಲೋಚಿಸದಿದ್ದರೂ ಕಾಣುವ ಇನ್ನೊಂದು ವಿಡಂಬನೆಯು ಶಿವನನ್ನು ಹೊಂದುವುದರಿಂದ ಉಂಟಾಗುವುದಲ್ಲ? ಮದುವೆಯಾಗಿ

ಅಲಂಕರಿಸಿದ ಆನೆಯ ಮೇಲೆ ಕುಳಿತು ಹೋಗಬೇಕಾದ ನೀನು ಆತನೊಡನೆ ಮುದಿಯೆತ್ತನ್ನೇರಿ ಪ್ರಯಾಣ ಮಾಡಬೇಕಾಗುವುದು ತಾನೆ?

ಪಾರ್ವತಿ: ಹೌದು. ಆನೆಯನ್ನೇರಿದ ಇಂದ್ರನೂ ಕೂಡ ಮುದಿ ಎತ್ತನ್ನೇರಿದ ಶಿವನಿಗೆ ನಮಸ್ಕರಿಸುವುದಿಲ್ಲವೆ? ಹೀಗಿರುವಲ್ಲಿ ಅವನೊಡನೆ ಮುದಿಯೆತ್ತನ್ನೇರುವುದರಿಂದ ಉಂಟಾಗುವ ವಿಡಂಬನೆಯಾದರೂ ಏನು?

ಬ್ರಹ್ಮಚಾರಿ: ನೀನು ನನ್ನ ಮಾತನ್ನೇ ತಡೆಯಲು ನೋಡುತ್ತಿದ್ದರೂ, ಅಲ್ಲಿನ ಯಾಥಾರ್ಥ್ಯವು ಬೇರೆಯೇ ಇದೆ. ಆದರೆ, ಇನ್ನೊಂದು ಮಾತನ್ನಷ್ಟೇ ನಾನು ಆಡಬಯಸುತ್ತೇನೆ. ತ್ರೈಲೋಕ್ಯಸುಂದರಿಯಾದ ನೀನು ಆ ಭಯಂಕರ ಮೂರ್ತಿಯೊಡನೆ ಸೇರುವುದರಲ್ಲಿ ಯಾವ ಸಾಮರಸ್ಯವಿದೆ? ಇಷ್ಟೇ ಅಲ್ಲದೆ ಅವನೇನಾದರೂ ಶ್ರೀಮಂತನೇ? ವಸ್ತ್ರವನ್ನು ಹೊದ್ದುಕೊಳ್ಳಲು ಬಟ್ಟೆಯಿಲ್ಲದೆ, ದಿಗಂಬರನಾಗಿ ತಿರುಗುತ್ತಿರುವ ಅವನು ಯಾವ ಗಳಿಗೆಯಲ್ಲಿ ಹುಟ್ಟಿದನೋ ಅದೂ ಗೊತ್ತಿಲ್ಲ. ಹೀಗಿರುವಾಗ ವರನಲ್ಲಿರಬೇಕಾದ ಯಾವ ಗುಣವು ಅವನಲ್ಲಿದ್ದಂತಾಯಿತು? ಆದಕಾರಣ ಈ ಅನಿಷ್ಟದಿಂದ ಮನವನ್ನು ತಿರುಗಿಸು. ನಿನಗೆ ಅವನೆಂದಿಗೂ ಸಮಾನನಾಗಲಾರ. ಶ್ಮಶಾನ ಶೂಲಕ್ಕೆ ಯೂಪ ಸತ್ಕ್ರಿಯೆಯನ್ನು ನನ್ನಂತಹವರು ಬಯಸುವಂತೆಯೇ ಇಲ್ಲ. ಆದ್ದರಿಂದ ಅವನನ್ನು ವರಿಸುವ ಆಲೋಚನೆಯನ್ನು ಬಿಟ್ಟು ಬಿಡು. ಬೇರೆ ಯಾವನಾದರೂ ಯೋಗ್ಯನನ್ನು ವರಿಸುವ ಆಲೋಚನೆ ಮಾಡು.

ಪಾರ್ವತಿ: (ಸಿಟ್ಟುಗೊಂಡು] ಪೂಜ್ಯರೇ! ಅವನು ಶ್ರೀಮಂತನಲ್ಲದಿದ್ದರೂ ಶ್ರೀಗೆ ಕಾರಣನಲ್ಲವೇ? ಭೀಮರೂಪನಾದರೂ ಶಿವನಲ್ಲವೇ? ದಶದಿಶೆಯನ್ನೇ ಅಂಬರವಾಗಿ ಹೊದ್ದುಕೊಂಡಿರುವ ಮಹಾಮೂರುತಿಗೆ ಕೃತಕ ಬಟ್ಟೆಯಲ್ಲಿ ಆಶೆ ಇರುವುದೇ? ಹೀಗಿರುವಾಗ ಅವನ ಯಥಾರ್ಥ್ಯವನ್ನು ತಿಳಿದವರು ಇರುವರೇ? ನೀವಾದರೂ ಆ ಪರಮ ಶಿವನ ನೆಲೆಯನ್ನು ಏನು ಬಲ್ಲಿರಿ? ತಿಳಿಯದೆಯೇ ನೀವು ಹೀಗೆ ಎಲ್ಲೆ ಮೀರಿ ಮಾತಾಡುತ್ತಿರಬೇಕು. ಯಾವ ಗಳಿಗೆಯಲ್ಲಿ ಹುಟ್ಟಿದನೋ ಗೊತ್ತಿಲ್ಲ, ಎಂದು ನೀವು ಅವನನ್ನು ಆಕ್ಷೇಪಿಸಿದರೂ ಅದು ಸತ್ಯವೇ ಆಗಿದೆ. ಹೌದು, ಬ್ರಹ್ಮನಿಗೂ ಕಾರಣನೆಂದು ಯಾರು ಕರೆಯಲ್ಪಡುತ್ತಾನೋ, ಅವನು ಹೇಗೆ ತಾನೆ ಲಕ್ಷ್ಯಪ್ರಭವನಾಗಬಲ್ಲನು? ನೀವು ಇಷ್ಟು ತಿಳಿಯದೆ ಮಾತನಾಡುವಿರೆಂದು ನಾನು ತಿಳಿದಿರಲಿಲ್ಲ. ಇರಲಿ. ನಿಮ್ಮಂತಹವರೊಡನೆ ಮಾತನಾಡುವುದರಿಂದ ಪ್ರಯೋ

ಜನವೇನು? ನೀವು ಹೇಳಿದಂತೆಯೇ ಆ ಶಿವನು ಇದ್ದುಕೊಳ್ಳಲಿ. ಆದರೂ ನಾನವನನ್ನು ವರಿಸಿಯೇ ತೀರುವವಳು. ಯಾಕೆಂದರೆ ನನ್ನ ಹೃದಯವು ಆತನಲ್ಲಿ ನೆಲೆಗೊಂಡಿದೆ. ಇನ್ನದು ಬದಲಾಗುವಂತೆಯೇ ಇಲ್ಲ. ಸ್ವೇಚ್ಛಾ ವ್ಯವಹಾರಿಗಳು ಇನ್ನೊಬ್ಬರ ಮಾತನ್ನು ಕೇಳಲಾರರು. ಆದ್ದರಿಂದ ನೀವು ಆ ವಿಷಯದಲ್ಲಿ ನನಗೆ ಉಪದೇಶಮಾಡದೆ ಬಂದ ದಾರಿ ಹಿಡಿಯಿರಿ. (ಸಖಿಯೊಡನೆ) ಸಖಿ! ಈ ವಟು ಇನ್ನೂ ಏನನ್ನೋ ಹೇಳುವುದಕ್ಕೆ ಬಯಸುವಂತಿದೆ. ಇವನನು ಇಲ್ಲಿಂದ ತೊಲಗಿಸು. ಮಹಾತ್ಮರನ್ನು ನಿಂದಿಸುವ ಇವನ ಮಾತುಗಳನ್ನು ನಾವೂ ಕೇಳಿ, ದೋಷಿಗಳಾಗಕೂಡದು. (ಆಲೋಚಿಸಿ) ಇಲ್ಲವಾದರೆ ಬೇಡ. ನಾನೇ ಹೋಗುವೆನು. (ಎಂದು ಹೊರಡುವಳು. ವಲ್ಕಲವು ಸ್ತನದಿಂದ ಸರಿಯುವುದು. ಬ್ರಹ್ಮಚಾರಿಯ ಸ್ಥಳದಲ್ಲಿ ಶಿವನು ಪ್ರತ್ಯಕ್ಷನಾಗಿ, ನಸುನಕ್ಕು ಆಕೆಯ ಕೈಯನ್ನು ಹಿಡಿಯುವನು. ಪಾರ್ವತಿ ಲಜ್ಜೆ, ಆಶ್ಚರ್ಯಗಳಿಂದ ಸ್ತಂಭಿತಳಾಗಿ ಅಡಿಗೆಂಗುವಳು.)

ಶಿವ: (ಪಾರ್ವತಿಯನ್ನೆತ್ತಿ) ಪಾರ್ವತಿ! ನೀನು ನನ್ನನ್ನು ತಪಸ್ಸಿನಿಂದ ಬೆಲೆಗೆ ಪಡೆದಿರುವೆ. ಆದ್ದರಿಂದ ಇಂದು ಮೊದಲ್ಗೊಂಡು ನಾನು ನಿನ್ನ ಸೇವಕನು. ನಿನ್ನ ತಪಸ್ಸಿಗೆ "ಫಲೋದಯ"ವಾದಂತಾಯಿತಷ್ಟೆ? ಇನ್ನು ತಪದ ಕ್ಲೇಶವನ್ನು ಕಳೆದು, ನನ್ನೊಡನೆ ಸುಖವಾಗಿ ಬಾಳುವೆಯಂತೆ!

ಪಾರ್ವತಿ: ದೇವಾ! ಇನೀಗ ಧನ್ಯಳಾದೆನು,

॥ ಭದ್ರಂ ಶುಭಂ ಮಂಗಳಂ ॥

Edited, Printed & Published by K. V. Shenoy
at the Prabhat Printers, Ltd., Mangalore.